1 2	3	4	5	6
44) ನಾಗಪ್ಪಸಾಲೋನಿ ಬೃಹತ್ ನೀರಾವರಿ ಮತ್ತು ಮಧ್ಯಮ ನೀರಾವರಿ ರಾಜ್ಯ ಸಚಿವರು	2256993	1,03,116-00	3414334	16,876-00
45) ಎಂ.ಸಿ. ಮನಗೋಳಿ ಗ್ರಾಮೀಣಾಭಿವೃದ್ಧಿ ರಾಜ್ಯ ಸಚಿವರು	2258089	2,95,750-00	3416042	1,428-00
46) ಹೆಚ್. ಶಿವಪ್ಪ ಸಣ್ಣ ಮತ್ತು ಸಹಕಾರ ಸಣ್ಣ ಕಾರ್ಖಾನೆಗಳ ರಾಜ್ಯ ಸಚಿವರು	2259388	2,07,172-00	3410112	66,922-00
47) ಡಿ. ನಾಗರಾಜಯ್ಯ ರೇಷ್ಮೆ ರಾಜ್ಯ ಸಚಿವರು		2200631		
48) ಅಮರನಾಥ ಶೆಟ್ಟಿ ಕಾರ್ಮಿಕ ರಾಜ್ಯ ಸಚಿವರು		2252021		
49) ಡಿ.ನಾರಾಯಣ ದಾಸ್ ಸಮಾಜ ಕಲ್ಯಾಣ ರಾಜ್ಯ ಸಚಿವರು		2200633	ಈ ಸಚಿವರುಗಳು 1999ನೇ ಸಾಲಿನಲ್ಲಿ ನೇಮಕವಾಗಿದ್ದುದರಿಂದ ಉತ್ತರ ಉದ್ಭವಿಸುವುದಿಲ್ಲ	
50) ಅಶ್ವತ್ಥನಾರಾಯಣರೆಡ್ಡಿ ಗೃಹ ರಾಜ್ಯ ಸಚಿವರು		2200634		
51) ಬಿ.ಎಲ್. ಶಂಕರ್ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು		2200406		

ಕಾವೇರಿ 4ನೇ ಯೋಜನೆಯ 2ನೇ ಹಂತಕ್ಕೆ ಟೆಂಡರ್.

982(258) ಶ್ರೀ ಶ್ರೀ ರಾಮಲಿಂಗಾರೆಡ್ಡಿ (ಜಯನಗರ) :— ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಬೆಂಗಳೂರು ಜಲಮಂಡಲಿ ಕಾವೇರಿ 4ನೇ ಹಂತ ಎರಡನೇ ಫೇಸ್‌ಗೆ ಟೆಂಡರ್‌ಗಳನ್ನು ಯು.ಕೆ ಬೈವಾಟರ್ ಸಮೂಹಕ್ಕೆ ನೀಡಿರುವುದು ನಿಜವೇ?

2. ಹಾಗಿದ್ದಲ್ಲಿ ಈ ಟೆಂಡರ್ ನೀಡಲು ಸರ್ಕಾರ ಅನುಸರಿಸಿದ ನಿಯಮಗಳೇನು?

ಶ್ರೀ ವಿ. ಸೋಮಣ್ಣ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು) :—

1) ಹೌದು. ಸರ್ಕಾರ ದಿನಾಂಕ 8.3.99ರ ಆದೇಶದಲ್ಲಿ, ಸಂಸ್ಥೆಯೊಂದಿಗೆ ನೀರಿನ ಶುಲ್ಕ ಮತ್ತು ಇತರೆ ಹಣಕಾಸಿನ ವಿಷಯಗಳಲ್ಲಿ ಸಮಾಲೋಚಿಸಿ ಯಾವುದೇ ಒಪ್ಪಂದವನ್ನು ಸಂಸ್ಥೆಯೊಂದಿಗೆ ಮಾಡಿಕೊಳ್ಳುವ ಮುನ್ನ ಸರ್ಕಾರದ ಒಪ್ಪಿಗೆಯನ್ನು ಪಡೆಯಬೇಕೆಂದು ಸರ್ಕಾರವು ಬೆಂಗಳೂರು ಜಲ ಮಂಡಳಿಗೆ ನಿರ್ದೇಶಿಸಿರುತ್ತದೆ.

ಅ) ಈ ಯೋಜನೆಯನ್ನು 'ಬೂಟ್' ಆಧಾರದ ಮೇಲೆ ಕಾರ್ಯಗತಗೊಳಿಸಲು ಉತ್ಸುಕರಾಗಿರುವ ಟೆಂಡರ್‌ದಾರರನ್ನು ಗುರ್ತಿಸಲು ಆಹ್ವಾನ ನೀಡಿತ್ತು. ಒಟ್ಟು 12 ಸಂಸ್ಥೆಗಳು ತಮ್ಮ ಇಚ್ಛೆಯನ್ನು ಸೂಚಿಸಿ ವಿವರಗಳನ್ನು ನೀಡಿದವು. ಟೆಂಡರ್‌ನಲ್ಲಿ ಪ್ರಕಟಿಸಿದ್ದ ಪೂರ್ವ ಅರ್ಹತಾ ಆಧಾರದ ಮೇಲೆ 8 ಸಂಸ್ಥೆಗಳನ್ನು ಅಂತಿಮ ಪಟ್ಟಿಯಲ್ಲಿ ಸೇರಿಸಲಾಯಿತುಯ ಟೆಂಡರ್‌ಗಳನ್ನು 7 ಸಂಸ್ಥೆಗಳು ಮಾತ್ರ ಖರೀದಿಸಿದವು ಹಾಗೂ ಕೇವಲ 3 ಸಂಸ್ಥೆಗಳು ಮಾತ್ರ ತಮ್ಮ ಟೆಂಡರ್‌ಗಳನ್ನು ಸಲ್ಲಿಸಿದವು. ಸಲ್ಲಿಸಿದ ಟೆಂಡರ್‌ಗಳನ್ನು ಅವರುಗಳು ಬೂಟ್ ಬಾಟ ಆಧಾರದ ಮೇಲೆ ಕೈಗೊಂಡಿರುವ ಯೋಜನೆಗಳು, ತಾಂತ್ರಿಕ ಚಾಲನ ಮತ್ತು ನಿರ್ವಾಹಣಾ ಸಾಮರ್ಥ್ಯ, ಹಾಗೂ ಹಣಕಾಸು ಹೊಂದಿಸುವಿಕೆ, ನೀರಿನ ದರಗಳ ಆದಾರದ ಮೇಲೆ ಬೆಂಗಳೂರು ಜಲ ಮಂಡಳಿಯು ವಿಶ್ಲೇಷಿಸಿ, ಸರ್ಕಾರಕ್ಕೆ ವಿವರಗಳನ್ನು ಸಲ್ಲಿಸಿತು. ವಿಶ್ಲೇಷಣೆಯ ಆಧಾರದ ಮೇಲೆ ಬೈವಾಟರ್ ಸಂಸ್ಥೆಯು ಅತಿ ಗರಿಷ್ಠ ಅಂಕ ಪಡೆದ ಬಿಡ್ಡರ್ ಎಂದು ಪರಿಗಣಿಸಲಾಗಿದೆ.

ಅನಧಿಕೃತ ಮನೆ ನಿರ್ಮಿಸಿರುವ ನಿವಾಸಿಗಳಿಗೆ ವಿದ್ಯುತ್ ಅಳವಡಿಸಿಕೊಡುವುದು.

984(933) ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) :— ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸರ್ಕಾರಿ ಪ್ರದೇಶದಲ್ಲಿ ಅನಧಿಕೃತವಾಗಿ ಮನೆ ನಿರ್ಮಿಸಿರುವ ನಿವಾಸಿಗಳಿಂದ ವಿದ್ಯುತ್ ಅಳವಡಿಸಿ ಕೊಡುವ ಬಗ್ಗೆ ಸರ್ಕಾರಕ್ಕೆ ಬೇಡಿಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ಸಚಿವರು) :—

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.